# ಬಿಲಿಯನೇರ್ ಗಾಯಕಿ!



'ಈ ಯುವತಿಯನ್ನು ಎಲ್ಲಿಯೋ ನೋಡಿದ್ದೇವಲ್ಲ' ಎಂದು ಕೆಲವರು, 'ಮತ್ತೆ ಯಾವ ಹೊಸ ಟ್ವೀಟ್ ಮಾಡಿದಳು' ಎಂದು ಹಲವರು ತಲೆ ಕೆರೆದುಕೊಳ್ಳುತ್ತಿರಬಹುದು. ಅಮೆರಿಕ ಹಾಗೂ ಯುರೋಪ್‌ನ ಪತ್ರಿಕೆಗಳ ಪ್ಲೇಲಿಸ್ಟ್‌ನಲ್ಲಿ ಮಾತ್ರ ಕಾಣುತ್ತಿದ್ದ ಈ ಯುವತಿಯ ಚಿತ್ರ, ಭಾರತೀಯ ಪತ್ರಿಕೆಗಳ ಮುಖಪುಟಗಳಲ್ಲೂ ರಾರಾಜಿಸಿದ್ದು ನಿಜ. ನೀವು ಆ ಚಿತ್ರವನ್ನು ನೋಡಿದ್ದೂ ನಿಜ. ಅವಳೇ ಅಮೆರಿಕದ ಗಾಯಕಿ ರಿಯಾನಾ! ಆದರೀಗ ಬೇರೊಂದು ಕಾರಣಕ್ಕೆ ಸುದ್ದಿಯಲ್ಲಿದ್ದಾಳೆ. ಅವಳೀಗ ಜಗತ್ತಿನ ಅತ್ಯಂತ ಸಿರಿವಂತ ಗಾಯಕಿಯಂತೆ. ರಿಯಾನಾ ಆಸ್ತಿಯ ಒಟ್ಟು ಮೌಲ್ಯ 170 ಕೋಟಿ ಡಾಲರ್ (1.25 ಲಕ್ಷ ಕೋಟಿ ರೂಪಾಯಿ) ಎಂದು ಫೋರ್ಬ್ಸ್ ಲೆಕ್ಕ ಹಾಕಿದೆ.

ಬಾರ್ಬಡೋಸ್‌ನ ಈ ಗಾಯಕಿಯ ಪೂರ್ಣ ಹೆಸರು ರಾಬಿನ್ ರಿಯಾನಾ ಫೆಂಟಿ ಎಂದು. 'ವಿ ಫೌಂಡ್ ಲವ್', 'ಅಂಬ್ರೆಲಾ'ದಂತಹ ಹಾಡುಗಳ ಮೂಲಕ ಜಗತ್ತಿನ ಸಂಗೀತಪ್ರಿಯರ ಮನಕ್ಕೆ ಲಗ್ಗೆ ಹಾಕಿದ ಆಕೆ, ಕೇವಲ ಸಂಗೀತ ಕ್ಷೇತ್ರಕ್ಕೆ ಸೀಮಿತಗೊಳ್ಳದೆ ಉದ್ಯಮ ರಂಗಕ್ಕೂ ಧುಮುಕಿದವಳು. 'ಫೆಂಟಿ ಬ್ಯೂಟಿ' ಎಂಬ ಸೌಂದರ್ಯ ಸಾಮಗ್ರಿಗಳ ಉತ್ಪಾದನಾ ಕಂಪನಿಯನ್ನೂ ಹೊಂದಿರುವ ರಿಯಾನಾ, ಸಿರಿವಂತರ ಪಟ್ಟಿಯಲ್ಲಿ ಮೇಲೇರಿ ಬರಲು ಆ ಕಂಪನಿಯನ್ನೇ ಏಣಿ ಮಾಡಿಕೊಂಡವಳು. ನಾಲ್ಕು ವರ್ಷಗಳ ಹಿಂದೆಯಷ್ಟೇ ಆರಂಭಿಸಲಾಗಿದ್ದರೂ ಫೆಂಟಿ ಬ್ಯೂಟಿ ಕಂಪನಿಯ ಸದ್ಯದ ಮಾರುಕಟ್ಟೆ ಮೌಲ್ಯ 140 ಕೋಟಿ ಡಾಲರ್ (1.03 ಲಕ್ಷ ಕೋಟಿ ರೂಪಾಯಿ) ಎಂದು ಅಂದಾಜಿಸಲಾಗಿದೆ. ಒಳ ಉಡುಪು ಉತ್ಪಾದಿಸುವ ಅವಳ ಮತ್ತೊಂದು ಕಂಪನಿ 'ಸೇವೇಜ್ ಎಕ್ಸ್ ಫೆಂಟಿ' ಸಹ ಭಾರಿ ಲಾಭವನ್ನು ತಂದುಕೊಡುತ್ತಿದೆ ಎಂದು ಫೋರ್ಬ್ಸ್ ಹೇಳಿದೆ.

ರಿಯಾನಾ, 2016ರಿಂದ ಈಚೆಗೆ ಯಾವುದೇ ಹೊಸ ಆಲ್ಬಂ ಹೊರತಂದಿಲ್ಲ. ಹೀಗಿದ್ದೂ ಅವಳ ಮೇಲಿನ ಸಂಗೀತಪ್ರಿಯರ ಅಭಿಮಾನಕ್ಕೆ ಯಾವುದೇ ಕುಂದು ಬಂದಿಲ್ಲ. ಇನ್‌ಸ್ಟಾಗ್ರಾಂ ಮತ್ತು ಟ್ವಿಟರ್‌ನಲ್ಲಿ ಹತ್ತು ಕೋಟಿಗೂ ಅಧಿಕ ಫಾಲೋವರ್‌ಗಳನ್ನು ಆಕೆ ಹೊಂದಿದ್ದಾಳೆ. ಟ್ವಿಟರ್ ಎಂದೊಡನೆ ಆಕೆ ಭಾರತೀಯ ರೈತರ ಪ್ರತಿಭಟನೆ ಪರವಾಗಿ ಮಾಡಿದ ಟ್ವೀಟ್ ನೆನಪಿಗೆ ಬಂದಿರಬೇಕಲ್ಲ? ದೆಹಲಿ ಗಡಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದ ಸ್ಥಳದಲ್ಲಿ ಇಂಟರ್ನೆಟ್ ಸ್ಥಗಿತಗೊಳಿಸಿದ ಕುರಿತು ಸಿಎನ್‌ಎನ್ ವರದಿಯನ್ನು ಟ್ಯಾಗ್ ಮಾಡಿದ್ದ ಆಕೆ, 'ನಾವೇಕೆ ಈ ವಿಷಯವಾಗಿ ಮಾತನಾಡುವುದಿಲ್ಲ' ಎಂದು ಪ್ರಶ್ನೆ ಮಾಡಿದ್ದಳು. ಅವಳ ಈ ಒಂದು ಟ್ವೀಟ್‌ನಿಂದ ಭಾರತ ಸರ್ಕಾರ ಎಷ್ಟೊಂದು ಮುಜುಗರ ಅನುಭವಿಸಿತ್ತೆಂದರೆ, 'ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ಬಂದಿದೆ' ಎಂಬಂತೆ ಈ ಪ್ರಕರಣವನ್ನು ಪ್ರತಿಬಿಂಬಿಸಲಾಗಿತ್ತು.

'ಅವಳ ಹೆಸರು ರಿಹನ್ನಾನೋ ರಿಯಾನಾನೋ?', 'ಆಕೆಯ ರಾಷ್ಟ್ರ ಯಾವುದು?', 'ಯಾವುದಕ್ಕೆ ಅವಳು ಖ್ಯಾತಳು?' – ರಿಯಾನಾ ಕುರಿತು ಇಂತಹ ಹತ್ತಾರು ಪ್ರಶ್ನೆಗಳು ಆಗ ಗೂಗಲ್‌ನಲ್ಲಿ ಪ್ರವಾಹೋಪಾದಿಯಲ್ಲಿ ಹರಿದುಬಂದಿದ್ದವು. ಪಾಪ್ ಪ್ರಿಯರನ್ನು ಹೊರತುಪಡಿಸಿದರೆ ಬಹುತೇಕ ಭಾರತೀಯರ ಪಾಲಿಗೆ ಆಕೆ ಅಪರಿಚಿತಳಾಗಿದ್ದಳು. ಅವಳನ್ನು ದೇಶದ ಜನರಿಗೆಲ್ಲ ಪರಿಚಯಿಸಿದ ಕೀರ್ತಿ ಕೇಂದ್ರದ ಸಚಿವರಿಗೆ ಸಲ್ಲಬೇಕು. ಏಕೆಂದರೆ, ಆರು ಪದಗಳ ಅವಳ ಟ್ವೀಟ್‌ಗೆ ವಿದೇಶಾಂಗ ಸಚಿವರನ್ನು ಮೊದಲು ಮಾಡಿ ಹಲವರು ಪುಂಖಾನುಪುಂಖವಾಗಿ ಮರುಟ್ವೀಟ್ ಮಾಡಿ, ರಿಯಾನಾ ಕುರಿತು ಜನರಲ್ಲಿ ಕುತೂಹಲ ಹೆಚ್ಚಿಸಿದ್ದರು. ರಿಯಾನಾ ರೈತರ ಪರ ಟ್ವೀಟ್ ಮಾಡಿದ ಎರಡೇ ದಿನಗಳಲ್ಲಿ ಅವಳ ಫಾಲೋವರ್‌ಗಳ ಸಂಖ್ಯೆ 13 ಲಕ್ಷದಷ್ಟು ಹೆಚ್ಚಾಗಿತ್ತು!

ರಿಯಾನಾ, ಜನರ ಪರವಾಗಿ ಧ್ವನಿ ಎತ್ತಿದ್ದು ಅದೇ ಮೊದಲೇನಲ್ಲ. ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ನಡೆದ ಹೋರಾಟದ ಪರವಾಗಿ, ವರ್ಣಭೇದ ನೀತಿಯ ವಿರುದ್ಧವಾಗಿಯೂ ಆಕೆ ಮಾತನಾಡಿದ್ದಾಳೆ. ಭಾರತೀಯ ರೈತರ ಪರ ಟ್ವೀಟ್ ಮಾಡಿದ ದಿನವೇ ಮ್ಯಾನ್ಮಾರ್‌ನ ಮಿಲಿಟರಿ ಬಲಪ್ರದರ್ಶನದ ವಿರುದ್ಧವೂ ಆಕೆ ಧ್ವನಿ ಎತ್ತಿದ್ದಾಳೆ. ಅಮೆರಿಕದಲ್ಲಿ ಕಪ್ಪು ವರ್ಣೀಯನಾದ ಜಾರ್ಜ್ ಫ್ಲಾಯ್ಡ್‌ನ ಕೊಲೆ ನಡೆದಾಗ ಅವಳು ಪ್ರತಿಭಟನೆ ನಡೆಸಿದ್ದಾಳೆ.

ಸಾಮಾಜಿಕ ಸಂಗತಿಗಳಿಗೆ ಸ್ಪಂದಿಸುವ ವಿಷಯದಲ್ಲಿ ರಿಯಾನಾ ಸದಾ ಮುಂದು. ಕಾಯಿಲೆಪೀಡಿತ ಮಕ್ಕಳಿಗೆ ನೆರವು ನೀಡಲು ಬಿಲೀವ್ ಫೌಂಡೇಷನ್ ಆರಂಭಿಸಿದಾಗ ಆಕೆಗೆ ಆಗಷ್ಟೇ 18ರ ಹರೆಯ. 2012ರಲ್ಲಿ ರಿಯಾನಾ ಆರಂಭಿಸಿದ ಕ್ಲಾರಾ ಲಿಯೊನೆಲ್ ಫೌಂಡೇಷನ್, ಬಡಮಕ್ಕಳ ಶಿಕ್ಷಣಕ್ಕೆ ನೆರವು ಒದಗಿಸುತ್ತಿದೆ. ಕೋವಿಡ್ ಸಂಕಟದ ಸಮಯದಲ್ಲಿ ನೆರವಿನ ನಿಧಿ ಸಂಗ್ರಹ ಮಾಡಿ, ಅಗತ್ಯವಿದ್ದವರಿಗೆ ತಲುಪಿಸುವ ಕೆಲಸವನ್ನೂ ಮಾಡಿದ್ದಾಳೆ. ಕೌಟುಂಬಿಕ ಹಲ್ಲೆಯಿಂದ ಸಂತ್ರಸ್ತರಾದವರ ನೆರವಿಗಾಗಿ ಕ್ಲಾರಾ ಲಿಯೊನೆಲ್ ಫೌಂಡೇಷನ್‌ನಿಂದ 15 ಕೋಟಿ ರೂಪಾಯಿ (2.1 ದಶಲಕ್ಷ ಡಾಲರ್) ನೆರವು ನೀಡಿದ್ದಾಳೆ. ಮನೆ ಇಲ್ಲದವರಿಗೆ, ಹಿರಿಯ ನಾಗರಿಕರಿಗೂ ಅಷ್ಟೇ ಪ್ರಮಾಣದ ಧನಸಹಾಯ ಮಾಡಿದ್ದಾಳೆ. ಸದಾ ಮಾನವ ಹಕ್ಕುಗಳ ಪರವಾಗಿ ಧ್ವನಿ ಎತ್ತುವ ರಿಯಾನಾ ವಿವಾದದಿಂದಲೂ ಹೊರತಾದವಳಲ್ಲ. ಅವಳ ಹಾಡಿನ ಆಲ್ಬಂನ ಒಂದು ಸಾಲು ಹೀಗಿದೆ: 'ಐ ಲೈಕ್ ದಿ ವೇ ಇಟ್ ಹರ್ಟ್ಸ್'. ಈ ಸಾಲು ಹಿಂಸೆಯನ್ನು ವಿಜೃಂಭಿಸುವುದಿಲ್ಲವೇ ಎಂದು ಪ್ರಶ್ನೆ ಎತ್ತಿದವರು ಹಲವರು. 'ಸೇವೇಜ್ ಎಕ್ಸ್ ಫೆಂಟಿ'ಯ ಫ್ಯಾಷನ್ ಶೋನಲ್ಲಿ ವಿವಾದಿತ ಹಾಡೊಂದನ್ನು ಬಳಸಿದ್ದಕ್ಕೆ ಈ ಗಾಯಕಿ ಕ್ಷಮೆ ಯಾಚಿಸಿದ್ದೂ ಇದೆ. ಖ್ಯಾತಿಯ ಜತೆಗೆ ಸಿರಿವಂತಿಕೆಯೂ ಟ್ವಿಟರ್ ಫಾಲೋವರ್‌ಗಳಂತೆಯೇ ಅವಳ ಬೆನ್ನುಬಿದ್ದಿದೆ.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65